ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 19–12–2020**

# ಮಾಧ್ಯಮ ಆಮಂತ್ರಣ

1) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ –102 ನೇ ರಾಜ್ಯ ಪರಿಷತ್ ಮಹಾಸಭೆ :

ಉದ್ಘಾಟನೆ :

ಎಸ್. ಸುರೇಶ್‌ಕುಮಾರ್, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು

ಉಪಸ್ಥಿತಿ :

ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

ದಿನಾಂಕ : 20–12–2020 ಭಾನುವಾರ ಬೆಳಿಗ್ಗೆ – 11–00 ಗಂಟೆಗೆ,
ಸ್ಥಳ : ಕೊಂಡಜ್ಜಿ ಬಸಪ್ಪ ಸಭಾಂಗಣ, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು

2) ಪತ್ರಿಕಾಗೋಷ್ಠಿ :
ರಾಮದಾಸ್ ಅಥವಾಲೆ
ರಾಜ್ಯ ಸಚಿವರು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,
ಭಾರತ ಸರ್ಕಾರ
ದಿನಾಂಕ : 20–12–2020 ಭಾನುವಾರ ಸಮಯ : ಮಧ್ಯಾಹ್ನ 1–30 ಗಂಟೆಗೆ
ಸ್ಥಳ : ಕುಮಾರ ಕೃಪ ಅತಿಥಿ ಗೃಹ, ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಗ್ರಾಮ ಪಂಚಾಯತ್ ಚುನಾವಣಾ ಸದಸ್ಯ ಸ್ಥಾನಗಳ ಹರಾಜು ದೂರಿಗೆ ಸಂಬಂಧಿಸಿದಂತೆ 07 ಪ್ರಕರಣಗಳು ದಾಖಲು

**ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ): ಗ್ರಾಮ ಪಂಚಾಯಿತಿ ಸದಸ್ಯರ ಆಯ್ಕೆ ಸಂಬಂಧ ಜಿಲ್ಲಾ ವ್ಯಾಪ್ತಿಯಲ್ಲಿನ ಕೆಲವು ಗ್ರಾಮ ಪಂಚಾಯಿತಿಯ ಸದಸ್ಯ ಸ್ಥಾನಗಳಿಗೆ ಹರಾಜಿನ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತಿರುವ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ, ಕ್ರಮಕೈಗೊಂಡಿದ್ದು, ಹರಾಜು ದೂರಿಗೆ ಸಂಬಂಧಿಸಿದಂತೆ 06 ಪ್ರಕರಣಗಳು ದಾಖಲಾಗಿವೆ ಎಂದು ರಾಜ್ಯ ಚುನಾವಣಾ ಆಯೋಗದ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

**ಬಳ್ಳಾರಿ ಜಿಲ್ಲೆಯ ಬೈಲೂರು ಗ್ರಾಮ, ಕಲಬುರುಗಿ ಜಿಲ್ಲೆಯ ಯಡ್ರಾಮಿ ತಾಲ್ಲೂಕಿನ ಬಿಳವಾರ ಗ್ರಾಮ ಪಂಚಾಯತ್ ವಾರ್ಡ್ ಸಂಖ್ಯೆ 1 , ಕೋಲಾರ ತಾಲ್ಲೂಕಿನ ವೇಮಗಲ್ ಹೋಬಳಿ ಮದ್ದೇರಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಬೆದ್ಲಿ ಹಾಗೂ ಇರಗಸಂದ್ರ. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ಕಾಲುವೇಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯಾದಲಗಟ್ಟೆ ಗ್ರಾಮ, ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ರಾಮನಾತಪುರ ಹೋಬಳಿ ಬೆಳಗುಲಿ ಗ್ರಾಮ ಹಾಗೂ ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನ ಹೊಸಳ್ಳಿ ಇಜೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೊಸಳ್ಳಿ ಇಜೆ ಕ್ಯಾಂಪಿನಲ್ಲಿ ತಲಾ ಒಂದೊಂದು ಪ್ರಕರಣಗಳು ದಾಖಲಾಗಿವೆ.**

# ಪರೀಕ್ಷೆಗೆ ಹಾಜರಾಗಲು ವಿನಾಯಿತಿ

**ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ): ಕರ್ನಾಟಕ ಲೋಕಸೇವಾ ಆಯೋಗದಿಂದ ಡಿಸೆಂಬರ್ 21, 23, 24 ಮತ್ತು 28 ರಂದು ನಡೆಸಲಿರುವ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿ ಸಹಾಯಕ ನಿಂತ್ರಕರ ಹುದ್ದೆಗಳ ಮುಖ್ಯ ಪರೀಕ್ಷೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಸರ್ಕಾರಿ ನೌಕರರಾಗಿದ್ದು, ಮತದಾನ/ಮತ ಎಣಿಕೆ ಕಾರ್ಯಕ್ಕೆ ನಿಯೋಜಿತರಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಸಂಬಂಧಿತ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಹಾಜರು ಪಡಿಸಿ, ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡುವಂತೆ ಮನವಿ ಸಲ್ಲಿಸಿದ್ದಲ್ಲಿ ಅಂತಹವರಿಗೆ ಮತದಾನ-ಮತಎಣಿಕೆ ಕಾರ್ಯಕ್ಕೆ ವಿನಾಯಿತಿ ನೀಡುವಂತೆ ರಾಜ್ಯ ಚುನಾವಣಾ ಆಯೋಗವು ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮಾಹಿತಿ ನೀಡಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಸಹಾಯಕ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

# Jupiter and Saturn Conjunction

**Bengaluru, December 19 (Karnataka Information)**

**The great conjunction of Jupiter and Saturn is occurring on 21st December 2020. The Jawaharlal Nehru Planetarium, Bengaluru, is making arrangements to watch the Jupiter and Saturn Conjunction through telescopes - subject to favourable weather conditions on 20th and 21st December 2020 between 6:30 pm and 7:30 pm. The interested public must register**

through https://forms.gle/3hvygBxr8EPqd2ai6 to witness this celestial event from the Planetarium.

Due to restrictions in force for Covid19, only the registered persons (through the Google form) are allowed to watch the event on first-come first-served basis on the registered date. However, the Planetarium is making arrangements for online webcast of the great conjunction. This can be seen at www. taralaya.org, our facebook and youtube channel subject to favourable weather condition says official press release.

## ಆನ್‌ಲೈನ್ ಮುಖಾಂತರ ವಂತಿಕೆ ಪಾವತಿ ಕಡ್ಡಾಯ

**ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ):**

ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಕಾರ್ಖಾನೆಗಳು, ಪ್ಲಾಂಟೇಶನ್‌ಗಳು, ಮೋಟಾರು ವಾಹನ ಸಂಸ್ಥೆಗಳು ಹಾಗೂ 50 ಮತ್ತು ಅದಕ್ಕಿಂತ ಹೆಚ್ಚು ಕಾರ್ಮಿಕರನ್ನು ಹೊಂದಿರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು/ITBT ಸಂಸ್ಥೆಗಳು, ಚಾರಿಟಬಲ್ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು, ಕರ್ನಾಟಕ ಸೊಸೈಟಿ ಕಾಯ್ದೆ 1960 ರಡಿಯಲ್ಲಿ ನೊಂದಣಿಯಾಗಿರುವ ಸಂಘಗಳು ಕಡ್ಡಾಯವಾಗಿ ಆನ್‌ಲೈನ್ ಮುಖಾಂತರ ವಂತಿಕೆ ಪಾವತಿಸ ಬೇಕಾಗಿರುತ್ತದೆ. ತಿದ್ದುಪಡಿಯನ್ನು ಮಾಡಿ ದಿನಾಂಕ: 01.12.2020 ರಂದು ನಿರಸನಗೊಳಿಸಿ ಕರ್ನಾಟಕ ರಾಜ್ಯದ ವಿಶೇಷ ರಾಜ್ಯ ಪತ್ರಿಕೆಯಲ್ಲಿ ಪ್ರಕಟಗೊಳಿಸಲಾಗಿದೆ. ಈ ತಿದ್ದುಪಡಿ ಕಾಯ್ದೆಯನ್ನು ಮೂಲ ಕಾರ್ಮಿಕ ಕಲ್ಯಾಣ ನಿಧಿ ಕಾಯ್ದೆ 1965 ಸೆಕ್ಷನ್ 7ಎ ಗೆ ಸೇರಿಸಲಾಗಿದೆ. ಆದ್ದರಿಂದ ಕಾರ್ಮಿಕರು ರೂ.20/– ಮಾಲೀಕರು ರೂ.40/– ರಂತೆ ಒಟ್ಟು ರೂ 60/– ರಂತೆ ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿಗೆ ವಂತಿಗೆ ಪಾವತಿಸುವುದು ಕಡ್ಡಾಯವಾಗಿರುತ್ತದೆ.

ಈ ಕಾಯ್ದೆಯಡಿಯಲ್ಲಿ ಆನ್‌ಲೈನ್ ಮುಖಾಂತರ ವಂತಿಗೆ ಪಾವತಿಸಬೇಕಾದ ವೆಬ್‌ಸೈಟ್ ವಿಳಾಸ www.klwb.karnataka.gov.in ವಂತಿಗೆ ಪಾವತಿಗೆ ಕಡೆಯ ದಿನಾಂಕ: 15–01–2021 (2020 ನೇ ಕ್ಯಾಲೆಂಡರ್ ವರ್ಷಕ್ಕೆ) ನಿಯಮ ಪಾಲಿಸದ ಸಂಸ್ಥೆಗಳಿಗೆ ಮೊದಲ 3 ತಿಂಗಳಿಗೆ ಶೇಕಡ 12% ರಂತೆ ಹಾಗೂ ನಂತರದ ತಿಂಗಳಿಗೆ ಶೇಕಡ 18% ಬಡ್ಡಿಯನ್ನು ದಂಡವಾಗಿ ವಿಧಿಸಬಹುದು, ಹಾಗು ಕಲ್ಯಾಣ ಆಯುಕ್ತರಿಂದ ತಪಾಸಣೆ/ತನಿಖೆಗೆ ಒಳಪಡಬೇಕಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 8277291175, 8277120505, 080–23475188 ಮೂಲಕ ಸಂಪರ್ಕಿಸಬಹುದು.

## Remit contributions online

**Bengaluru, December 19 (Karnataka Information)**

It is mandatory for the below mentioned establishments to remit contributions as per the Karnataka Labour Welfare Fund, Act 1965. Compulsory contributions has to be paid by all factories, plantations, workshops, motor, omnibus services and shops and commercial establishments/ITBT firms employing more than 50 workers, charitable trusts, societies registered under Karnataka Societies Registration Act, 1960, etc.

Amendment Act is repealed by Government and has been inserted the original Act_ Therefore Factory/Establishment will pay contribution at the ratio of Rs. 20:40 (Employees Rs. 20/ Employers Rs. 40) & to be remitted through online only. Labour welfare fund payment for online www.klwb.karnataka.gov.in LAST DATE TO PAY CONTRIBUTION: 15-01-2021 (CALENDER YEAR 2020) Delay in payment of Contributions will attract penal interest at the rate of 12% for 1st 3 months and after 3 months 18% on the amount due, and inspections by the Welfare Commissioner. For further clarification contact phone No. 8277291175, 8277120505, 080–23475188.

## ಕೋಚಿಂಗ್ ಸೆಂಟರ್‌ಗಳ ಪ್ರತಿನಿಧಿಗಳ ಪೋಷಕರುಗಳ ಸಭೆ

ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ):

ಬೆಂಗಳೂರು ಉತ್ತರ ಜಿಲ್ಲೆಯಲ್ಲಿನ ಕೋಚಿಂಗ್ ಸೆಂಟರ್‌ಗಳನ್ನು ನಿಗ್ರಹಿಸುವ ನಿಟ್ಟಿನಲ್ಲಿ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಕೋಚಿಂಗ್ ಸೆಂಟರ್‌ಗಳ ಪ್ರತಿನಿಧಿಗಳನ್ನು ಹಾಗೂ ಪೋಷಕ ಸಂಘಗಳ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಲಾಗಿದೆ. ಸಭೆಯು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಕೊಠಡಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, 6 ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇಲ್ಲಿ ಡಿಸೆಂಬರ್ 22 ರಂದು ಅಪರಾಹ್ನ 3–30 ಗಂಟೆಗೆ ಜರುಗಲಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನೀರಿನ ವ್ಯತ್ಯಯ

ಬೆಂಗಳೂರು, ಡಿಸೆಂಬರ್ 19 (ಕರ್ನಾಟಕ ವಾರ್ತೆ):

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ವೆಲ್ಲಾರ್ ಜಂಕ್ಷನ್ ಹಾಗೂ ಡೈರಿ ವೃತ್ತದೊಂದಿಗೆ ಬನ್ನೇರುಘಟ್ಟ ರಸ್ತೆಯ 6 ಸ್ಥಳಗಳಲ್ಲಿ ಮೆಟ್ರೋ 2 ನೇ ಹಂತದ ಕಾಮಗಾರಿಯ ಗೊಟ್ಟಿಗೆರೆ ಮತ್ತು

ನಾಗವಾರ ಅಂಡರ್‌ಗ್ರೌಂಡ್ ನಿಲ್ದಾಣಕ್ಕೆ ನೀರಿನ ಸೌಲಭ್ಯವನ್ನು ಒದಗಿಸಲು 600 ಮಿ.ಮೀ ವ್ಯಾಸದ ಮತ್ತು 900 ಮಿ.ಮೀ ವ್ಯಾಸದ ಕೊಳವೆ ಮಾರ್ಗಗಳ ಸಂಪರ್ಕ ಕಾಮಗಾರಿಯನ್ನು ಕೈಗೆತ್ತಿಕೊಂಡ ಹಿನ್ನಲೆಯಲ್ಲಿ ಕಾವೇರಿ 1ನೇ ಹಂತದ ಪಂಪ್‌ಗಳನ್ನು ಸ್ಥಗಿತಗೊಳಿಸುತ್ತಿದ್ದು, ದಿನಾಂಕ:21-12-2020 ರಂದು ಬೆಳಗ್ಗೆ: 07:00 ಗಂಟೆಯಿಂದ 22-12-2020 ರ ಬೆಳಗ್ಗೆ: 03:00 ಗಂಟೆಯವರೆಗೆ ಈ ಕೆಳಕಂಡ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ಶಾಂತಲಾ ನಗರ, ಶಾಂತಿ ನಗರ, ವಿನಾಯಕ ನಗರ, ಆನೆಪಾಳ್ಯ, ಎಲ್.ಆರ್ ನಗರ, ಅಂಬೇಡ್ಕರ್ ನಗರ, ನೀಲಸಂದ್ರ, ಆಸ್ಟಿನ್‌ಟೌನ್, ಈಜಿಪುರ, ವಿವೇಕನಗರ, ಅಶೋಕ ನಗರ, ರಿಚ್‌ಮಂಡ್ ಟೌನ್, ಎಂ.ಜಿ.ರಸ್ತೆ, ಜೆ.ಕೆ.ಪುರ, ಎಂ.ಬಿ.ಗಾರ್ಡನ್, ವಿಕ್ಟೋರಿಯ ಲೇಔಟ್, ಜೀವನ್ ಭೀಮಾನಗರ, ಹೆಚ್.ಎ.ಎಲ್ 2 & 3ನೇ ಹಂತ, ದೊಮ್ಮಲೂರು, ಅಮರಜ್ಯೋತಿ ಬಡಾವಣೆ, ಕೋಡಿಹಳ್ಳಿ, ಹನುಮಂತಪ್ಪ ಲೇಔಟ್, ಹಲಸೂರು, ಜೋಗುಪಾಳ್ಯ, ಕೇಂಬ್ರಿಡ್ಜ್ ಲೇಔಟ್, ಗೌತಮ್ ಪುರ, ದೀನಬಂಧು ನಗರ, ರಾಜೇಂದ್ರ ನಗರ, ವೆಂಟಸ್ವಾಮಿ ರೆಡ್ಡಿ ಲೇಔಟ್, ಮಲ್ಲಪ್ಪ ರೆಡ್ಡಿ ಲೇಔಟ್, ನಂಜಪ್ಪ ರೆಡ್ಡಿ ಲೇಔಟ್, ಕೆ.ಆರ್. ನಂಜಪ್ಪ ಲೇಔಟ್, ಆಡುಗೋಡಿ, ಕೋರಮಂಗಲ, ಕೆ.ಹೆಚ್.ಬಿ ಬ್ಲಾಕ್, ಕತ್ತಳ ಪಾಳ್ಯ, ಕೆ.ಹೆಚ್.ಬಿ ಕಾಲೋನಿ, ಜಾನ್ ನಗರ, ಎನ್‌ಜಿವಿ, ಜಯನಗರ 3 & 4ನೇ ಬ್ಲಾಕ್ ಹಾಗೂ 4ನೇ 'ಟಿ' ಬ್ಲಾಕ್, ತಿಲಕ ನಗರ, ಎಸ್.ಆರ್.ನಗರ, ಚಂದ್ರಪ್ಪ ನಗರ, ಈರಮ್ಮ ಲೇಔಟ್, ವೆಂಟೇಶ್ವರ ಲೇಔಟ್, ಭುವನಪ್ಪ ಲೇಔಟ್, ಜೋಗಿ ಕಾಲೋನಿ, ಚಿಕ್ಕ ಆಡುಗೋಡಿ, ಬೃಂದಾವನ ನಗರ, ಮಾರುತಿ ನಗರ, ನೇತಾಜಿ ನಗರ, ನಾಗಮ್ಮ ನಗರ, ಕೇಶವನಗರ, ಕೆ.ಪಿ.ಅಗ್ರಹಾರ, ನ್ಯೂ ಬಿನ್ನಿಲೇಔಟ್, ಚಾಮರಾಜಪೇಟೆ, ವಿದ್ಯಾಪೀಠ, ಶ್ರೀನಿವಾಸ ನಗರ, ಬ್ಯಾಂಕ್ ಕಾಲೋನಿ, ಐ.ಟಿ.ಐ ಲೇಔಟ್, ಗುರುರಾಜ ಲೇಔಟ್, ಕತ್ರಿಗುಪ್ಪೆ, ಎನ್.ಆರ್.ಕಾಲೋನಿ, ಮೌಂಟ್ ಜಾಯ್ ಎಕ್ಸ್‌ಟೆನ್ಷನ್, ಕುಮಾರ ಸ್ವಾಮಿ ಲೇಔಟ್ 1 & 2ನೇ ಹಂತ, ವಿಠ್ಠಲ ನಗರ, ಬನಶಂಕರಿ 1ನೇ ಹಂತ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮಂಡಳಿಯೊಂದಿಗೆ ಸಹಕರಿಸಲು ಕೋರಿದೆ.